# ಕರ್ನಾಟಕ ಲೋಕಸೇವಾ ಆಯೋಗ, `` ಉದ್ಯೋಗ ಸೌಧ '',ಬೆಂಗಳೂರು -560001

ಸಂಖ್ಯೆ: ಪಿಎಸ್ ಸಿ 1 ಆರ್ ಟಿಬಿ-1/2017 ದಿನಾಂಕ: 11-09-2017

## ಸೇರ್ಪಡೆ ಅಧಿಸೂಚನೆ

` ಆಯೋಗವು ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ (ಹಿರಿಯ ವೈದ್ಯಾಧಿಕಾರಿ / ತಜ್ಞರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು) (ವಿಶೇಷ) ನಿಯಮಗಳು 2017 ರ ನಿಯಮಗಳಡಿಯಲ್ಲಿ 1430 ಉಳಿಕೆ ಮೂಲ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ 05-08-2017 ರಂದು ಅಧಿಸೂಚನೆಯನ್ನು ಹೊರಡಿಸಿ ಅಭ್ಯರ್ಥಿಗಳು Online ಮೂಲಕ ಅರ್ಜಿ ಸಲ್ಲಿಸಲು ದಿ: 11-09-2017 ಅನ್ನು ಕೊನೆಯ ದಿನಾಂಕವನ್ನಾಗಿ ನಿಗದಿಪಡಿಸಲಾಗಿತ್ತು.

ಸರ್ಕಾರವು ದಿನಾಂಕ 08-09-2017 ರ ಪತ್ರದೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಹೈದ್ರಾಬಾದ್ – ಕರ್ನಾಟಕ ವೃಂದದ 111(109 + 02 ಬ್ಯಾ.ಲಾ) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನುಮೇಲ್ಕಂಡ ನಿಯಮಗಳಿಗೆ ಮಾಡಲಾದ ದಿನಾಂಕ 07-09-2017ರ ತಿದ್ದುಪಡಿ ನಿಯಮಗಳಡಿ ಭರ್ತಿ ಮಾಡುವಂತೆ ಕೋರಿರುವುದರಿಂದ ಈ ಹುದ್ದೆಗಳನ್ನು ದಿನಾಂಕ 05-08-2017ರ ಆಯೋಗದ ಅಧಿಸೂಚನೆಗೆ ಸೇರ್ಪಡೆ ಮಾಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ನೀಡುವ ಸಲುವಾಗಿ ದಿನಾಂಕ 05-08-2017ರ ಅಧಿಸೂಚನೆಯಲ್ಲಿನ ಎಲ್ಲಾ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಕೊನೆಯ ದಿನಾಂಕವನ್ನು 25-09-2017 ರವರೆಗೆ ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕವನ್ನು 26-09-2017 ರವರೆಗೆ ವಿಸ್ತರಿಸಲಾಗಿದೆ.

- ಅರ್ಜಿ ಸಲ್ಲಿಸಲು ವಿಸ್ತರಿಸಿ ನಿಗದಿಪಡಿಸಿದ ಕೊನೆಯ ದಿನಾಂಕ :: 25-09-2017
- ಶುಲ್ಕ ಪಾವತಿಸಲು ವಿಸ್ತರಿಸಿ ನಿಗದಿಪಡಿಸಿದ ಕೊನೆಯ ದಿನಾಂಕ :: 26-09-2017
  (ಅಂಚೆ ಕಛೇರಿಯ ಕಾರ್ಯದ ವೇಳೆಯೊಳಗೆ)

ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಉಳಿಕೆ ಮೂಲಕ ವೃಂದದಲ್ಲಿನ ಹುದ್ದೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿದ್ದು, ಹೈಕ ಮೀಸಲಾತಿಯನ್ನು ಕೋರ ಬಯಸುವ ಅಭ್ಯರ್ಥಿಗಳು online ಅರ್ಜಿಯಲ್ಲಿ ಕಲ್ಪಿಸಿರುವ Edit option ಅನ್ನು ಬಳಸಿಕೊಂಡು ಅವರ ಹೈಕ ಮೀಸಲಾತಿಗೆ ಸಂಬಂಧಿಸಿದ ವಿವರಗಳನ್ನು ಭರ್ತಿ ಮಾಡಬಹುದು. ಆದರೆ ಹೈಕ ಮೀಸಲಾತಿಯನ್ನು ಕೋರಿರುವ ಅಭ್ಯರ್ಥಿಗಳು/ ಸರ್ಕಾರಿ ಸೇವೆಯಲ್ಲಿರುವ ಹೈಕ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡು ಆಯೋಗವು ಅಪೇಕ್ಷಿಸಿದಾಗ ಅದರ ಮೂಲ ಪ್ರತಿಯನ್ನು ಹಾಜರುಪಡಿಸತಕ್ಕದ್ದು. (ವಿವರ ಹಾಗೂ ನಮೂನೆಗಳನ್ನು ಇದರೊಂದಿಗೆ ಅನುಬಂಧಿಸಿದೆ)

ಮೇಲ್ಕಂಡ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ, ಇತ್ಯಾದಿ ವಿವರಗಳನ್ನು ಅನುಸೂಚಿಯಲ್ಲಿ ತೋರಿಸಲಾಗಿದೆ. ಇನ್ನುಳಿದಂತೆ ದಿನಾಂಕ 05-08-2017 ರ ಅಧಿಸೂಚನೆಯಲ್ಲಿನ ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಸಹಿ/-
(ಎನ್.ಎಸ್.ಪ್ರಸನ್ನಕುಮಾರ್)
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.

ಪ್ರತಿ:-

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಸಬ್ ಅರ್ಬನ್ ಪ್ರೆಸ್, ಕೆಂಚೇನಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-560001, ಇವರಿಗೆ ಮೇಲ್ಕಂಡ ಸೇರ್ಪಡೆ ಅಧಿಸೂಚನೆಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 150 ಪ್ರತಿಗಳನ್ನು ಆಯೋಗದ ಮಾಹಿತಿಗಾಗಿ ಸರಬರಾಜು ಮಾಡಲು ವಿನಂತಿಸಿದೆ.

**ಅನುಚ್ಛೇಧ 371 (ಜೆ) ರಂತೆ ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ:-**

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಅನುಬಂಧ-ಎ ಯಲ್ಲಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರಿಂದ ಪಡೆದಿಟ್ಟುಕೊಳ್ಳತಕ್ಕದ್ದು. ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ಈ ಪ್ರಮಾಣ ಪತ್ರದ ನಮೂನೆಯನ್ನು ಈ ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು. ಹೈದ್ರಾಬಾದ್ – ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳು ರಾಜ್ಯ ವೃಂದಕ್ಕೆ ಸೇರಿದ ಹುದ್ದೆಗಳಿಗೂ ಅರ್ಹತೆ ಇದ್ದಲ್ಲಿ ಪರಿಗಣಿಸಲಾಗುವುದು.

**ಸರ್ಕಾರಿ ಸೇವೆಯಲ್ಲಿರುವ ನೌಕರರಿಗೆ ಹೈದರಾಬಾದ್ - ಕರ್ನಾಟಕ ಮೀಸಲಾತಿ:-**

ಸರ್ಕಾರಿ ಸೇವೆಯಲ್ಲಿರುವ ನೌಕರರು ದಿನಾಂಕ 29-01-2014 ರಂದು ಹೊರಡಿಸಲಾದ ಅಧಿಸೂಚನೆ-1 ಸಂಖ್ಯೆ ಡಿಪಿಎಆರ್ 43 ಹೆಚ್‌ಕೆಸಿ 2013 ರಲ್ಲಿನ ಅನುಬಂಧ-ಎ ನಲ್ಲಿ ಇರುವಂತೆ ತಮ್ಮ ಸೇವಾ ಪುಸ್ತಕದಲ್ಲಿ ದಿನಾಂಕ:01-01-2013 ಕ್ಕಿಂತ ಮುಂಚಿನ ನಮೂದಿನಲ್ಲಿ ಅವರ ಸ್ವಂತ ಊರು ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ಹೈದರಾಬಾದ್ - ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬೀದರ್, ಕಲಬುರ್ಗಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಯಾದಗಿರಿ ಕಂದಾಯ ಜಿಲ್ಲೆಗಳ ಅಡಿಯಲ್ಲಿ ಬರುವಂತಹ ಪ್ರದೇಶದ ನಮೂದು ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳು ಕಛೇರಿ ಮುಖ್ಯಸ್ಥರಿಂದ ದಿನಾಂಕ:29-01-2014ರ ಅಧಿಸೂಚನೆ-1 ರಲ್ಲಿನ ನಿಯಮ 5(2) ರಲ್ಲಿ ನೀಡಲಾದ ಸ್ವಗ್ರಾಮ ಪ್ರಮಾಣ ಪತ್ರವನ್ನು ಆಧರಿಸಿ ಅಂತಹವರ ಅರ್ಜಿಯನ್ನು ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗೆದುರಾಗಿ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರದ ನಮೂನೆಯನ್ನು ಅನುಬಂಧ-ಎ ರಲ್ಲಿ ಈ ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ. ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.

ಅನುಬಂಧ – ಎ

ಅರ್ಹತಾ ಪ್ರಮಾಣ ಪತ್ರ

[ಅನುಚ್ಛೇಧ 371(ಜೆ)ಮೇರೆಗೆ]

[3(3)ನೇ ನಿಯಮ ನೋಡಿ]

[ಪ್ರಮಾಣ ಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು 2013]

ಶ್ರೀ / ಶ್ರೀಮತಿ ______________________________ ರವರು ______________________________

ರವರ ಮಗ / ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ____________________ ಜಿಲ್ಲೆಯ________________

ತಾಲ್ಲೂಕಿನ ______________________________ ಗ್ರಾಮ / ಪಟ್ಟಣದ ಸ್ಥಳೀಯ ವ್ಯಕ್ತಿಯಾಗಿದ್ದಾರೆ.

ಸ್ಥಳ: ________________________ ಹೆಸರು ______________________________

ದಿನಾಂಕ: ____________________ ಅಸಿಸ್ಟೆಂಟ್ ಕಮೀಷನರ್

____________________ ಉಪವಿಭಾಗ

____________________ ಜಿಲ್ಲೆ

..........................................................................................................................

ಅನುಬಂಧ – ಎ

ಸ್ವಗ್ರಾಮ ಪ್ರಮಾಣ ಪತ್ರ

(ಅನುಚ್ಛೇಧ 371(ಜೆ)ಮೇರೆಗೆ)

ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಹೈದ್ರಾಬಾದ್ - ಕರ್ನಾಟಕ ಮೀಸಲಾತಿಗೆ ಸಲ್ಲಿಸಬೇಕಾದ ಪ್ರಮಾಣ ಪತ್ರದ ದಿನಾಂಕ 29-01-2014ರ ಅಧಿಸೂಚನೆ-1 ರಲ್ಲಿನ (5(2)ನೇ ನಿಯಮ ನೋಡಿ)

(ಪ್ರಮಾಣ ಪತ್ರಗಳ ನೀಡಿಕೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು 2013)

ಶ್ರೀ / ಶ್ರೀಮತಿ ______________________________ ರವರು ______________________________

ರವರ ಮಗ / ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ____________________ಜಿಲ್ಲೆಯ____________________

.__________________ ತಾಲ್ಲೂಕಿನ ____________________ ಗ್ರಾಮ / ಪಟ್ಟಣವನ್ನು ತನ್ನ ಸೇವಾ ಪುಸ್ತಕದಲ್ಲಿ ತನ್ನ ಸ್ವಗ್ರಾಮ /ಸ್ಥಳ ಎಂದು ಘೋಷಿಸಿರುತ್ತಾರೆ.

ಸೇವಾ ಪುಸ್ತಕದಲ್ಲಿರುವ ನಮೂದನ್ನು ನಾನು ಖುದ್ದಾಗಿ ಪರಿಶೀಲಿಸಿದ್ದೇನೆ ಮತ್ತು ಮೇಲಿನ ನಮೂದು 01-01-2013 ಕ್ಕೆ ಮುಂಚೆ ಸೇವಾ ಪುಸ್ತಕದಲ್ಲಿ ಇತ್ತೆಂದು ಸ್ವತ: ಮನವರಿಕೆ ಮಾಡಿಕೊಂಡಿರುತ್ತೇನೆ.

ಸ್ಥಳ: ________________________ ಹೆಸರು ______________________________

ದಿನಾಂಕ: ____________________ ಪದನಾಮ ______________________________

ಕಛೇರಿ ______________________________

ಇಲಾಖೆ ______________________________

<table>
<tr><th>ಹುದ್ದೆಗಳ ಅನುಕ್ರಮ ಸಂಖ್ಯೆ</th><th>ಹುದ್ದೆಯ ಸಂಕೇತ/ POST CODE</th><th>ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ</th><th>ವೇತನ ಶ್ರೇಣಿ</th><th>ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ</th><th>ವಯೋಮಿತಿ (ವಯಸ್ಸು ವರ್ಷಗಳಲ್ಲಿ)</th><th>ಹುದ್ದೆಗಳ ವರ್ಗೀಕರಣ</th></tr>
<tr><td>1431-1541</td><td>11</td><td>ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು –111 (ಹೈಕ) (109+ 02 (ಬ್ಯಾ.ಲಾ) ಹುದ್ದೆಗಳು<br>GENERAL DUTY MEDICAL OFFICERS - 111 (HK )(109 +02(BL) POSTS</td><td>₹.28100-50100</td><td>Must have MBBS Degree from a University established by Law in India.<br><br>The General Duty Medical Officer recruited under these rules shall work in the rural areas for a minimum period of six years.</td><td>ಕನಿಷ್ಠ – 21<br>ಗರಿಷ್ಠ – 42<br>ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 45<br>ಪ.ಜಾ, ಪ.ಪಂ, ಪ್ರ 1 } 47</td><td>
<u>ಹೈದ್ರಾಬಾದ್ – ಕರ್ನಾಟಕ ಪ್ರಾದೇಶಿಕ ಸ್ಥಳೀಯ ವೃಂದ – 109 ಹುದ್ದೆಗಳು</u>
<table>
<tr><th>ಮೀಸಲಾತಿ</th><th>ಇ</th><th>ಮ</th><th>ಗ್ರಾ</th><th>ಮಾಸೈ</th><th>ಕಮಾಅ</th><th>ಅಂ.ವಿ.</th><th>ಒಟ್ಟು</th></tr>
<tr><td>ಪ.ಜಾ</td><td>04</td><td>06</td><td>04</td><td>02</td><td>01</td><td>-</td><td>17</td></tr>
<tr><td>ಪ.ಪಂ.</td><td>-</td><td>01</td><td>01</td><td>-</td><td>-</td><td>01*</td><td>03</td></tr>
<tr><td>ಪ್ರ.1</td><td>01</td><td>01</td><td>02</td><td>-</td><td>-</td><td>01*</td><td>05</td></tr>
<tr><td>ಪ್ರ.2ಎ</td><td>04</td><td>05</td><td>04</td><td>02</td><td>01</td><td>-</td><td>16</td></tr>
<tr><td>ಪ್ರ.2ಬಿ</td><td>01</td><td>01</td><td>02</td><td>-</td><td>-</td><td>01*</td><td>05</td></tr>
<tr><td>ಪ್ರ.3ಎ</td><td>-</td><td>01</td><td>02</td><td>-</td><td>-</td><td>01*</td><td>04</td></tr>
<tr><td>ಪ್ರ.3ಬಿ</td><td>01</td><td>01</td><td>02</td><td>-</td><td>-</td><td>01*</td><td>05</td></tr>
<tr><td>ಸಾ.ಅ.</td><td>14</td><td>17</td><td>13</td><td>06</td><td>03</td><td>01*</td><td>54</td></tr>
<tr><td>ಒಟ್ಟು</td><td>25</td><td>33</td><td>30</td><td>10</td><td>05</td><td>06</td><td>109</td></tr>
<tr><td colspan="8">*ಶ್ರವಣದೋಷವುಳ್ಳ / ಚಲನವಲನ ವೈಕಲ್ಯವುಳ್ಳ (One Arm / One Leg) ಅಭ್ಯರ್ಥಿಗಳಿಗೆ ಮಾತ್ರ</td></tr>
</table>
<u>ಬ್ಯಾಕ್ ಲಾಗ್ – 02 ಹುದ್ದೆಗಳು</u>
<table>
<tr><th>ಮೀಸಲಾತಿ</th><th>ಅಂ.ವಿ.</th><th>ಒಟ್ಟು</th></tr>
<tr><td>ಪ.ಜಾ</td><td>01*</td><td>01</td></tr>
<tr><td>ಪ್ರ.2ಎ</td><td>01*</td><td>01</td></tr>
<tr><td>ಒಟ್ಟು</td><td>02*</td><td>02</td></tr>
<tr><td colspan="3">*ಶ್ರವಣದೋಷವುಳ್ಳ / ಚಲನವಲನ ವೈಕಲ್ಯವುಳ್ಳ (One Arm / One Leg) ಅಭ್ಯರ್ಥಿಗಳಿಗೆ ಮಾತ್ರ</td></tr>
</table>
</td></tr>
</table>

ಮಹಿಳೆಯರಿಗೆ / ಮಾಜಿ ಸೈನಿಕರಿಗೆ / ಗ್ರಾಮೀಣ / ಕಮಾಅ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಸಹಿ/-
(ಎನ್.ಎಸ್.ಪ್ರಸನ್ನಕುಮಾರ್)
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.